ದಿನಾಂಕ 02.04.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಬಿ ಎಸ್ ಎ ವಕೀಲರಿಂದ

ರತ್ನವ್ವ ನನ್ನ ತಾಯಿ. ಅವರು ಕೊಪ್ಪರಸಿಕೊಪ್ಪದಲ್ಲಿ ವಾಸ ಮಾಡುತ್ತಾರೆ. ನಮ್ಮ ತಾಯಿಗೆ ದಾವೆ ಮಾಡಿದ ನಂತರ ಸಮನ್ಸ ಜಾರಿಯಾಗಿರುತ್ತದೆ. ನಂತರ ನನ್ನ ತಾಯಿ ತನ್ನ ಪರವಾಗಿ ಆರ್ ಎಸ್ ಟಿ ವಕೀಲರು ದಿಃ 06.04.2013 ರಂದು ವಕಾಲತ್ ಹಾಕಿದ್ದರು ಎಂದರೆ ಸರಿ. ದಾವಾ ಬಗ್ಗೆ ಮಾಹಿತಿ ಇದೆ. ದಾವಾ ನೋಟಿಸು ಬಂದ ನಂತರ ಎಲ್ಲಾ ತಿಳಿದುಕೊಂಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರಾಗಿ ಕಾಲ ಕಾಲಕ್ಕೆ ಮಾಹಿತಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ದಿಃ 22.04.2013 ರಂದು ನನ್ನ ತಾಯಿ 5 ನೇ ಪ್ರತಿವಾದಿಯ ಕೈಫಿಯತ್ ಇಲ್ಲ ಅಂತಾ ಆದೇಶ ಆಗಿತ್ತು ಎಂದರೆ ಸರಿ. ನಂತರ ನನ್ನ ತಾಯಿ ಯಾವುದೇ ಕೈಫಿಯತ್ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ. 62, 67, 68, 69 ಮತ್ತು ಖುಲ್ಲಾ ಜಾಗ ಇರುತ್ತದೆ.

ಮೂಲತಃ ದಾವಾ ಆಸ್ತಿಗಳು ರಾಮಣ್ಣನ ಆಸ್ತಿಗಳು. ರಾಮಣ್ಣನಿಗೆ ಇಬ್ಬರು ಮಕ್ಕಳು. ಅವರ ಹೆಸರು ಯಲ್ಲಪ್ಪ ಮತ್ತು ಪರಸಪ್ಪ. ರಾಮಣ್ಣ ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ರಾಮಣ್ಣನ ಮರಣದ ನಂತರ ಯಲ್ಲಪ್ಪ ಮತ್ತು ಪರಸಪ್ಪನ ಹೆಸರಿಗೆ ದಾವಾ ಆಸ್ತಿಗಳು ವರ್ಗಾವಣೆಗೊಂಡಿರುತ್ತವೆ. ರಾಮಣ್ಣನ ಮರಣದ ನಂತರ ಎಲ್ಲಾ ಆಸ್ತಿಗಳು ಯಲ್ಲಪ್ಪನ ಹೆಸರಿಗೆ ಇದ್ದವು ಎಂದರೆ ಹಿರಿಯ ಮಗ ಇದ್ದದ್ದರಿಂದ ಇರಬಹುದು ಅಂತಾ ನುಡಿಯುತ್ತಾರೆ. ಯಲ್ಲಪ್ಪ ತೀರಿಕೊಂಡ ದಿನಾಂಕ ಗೊತ್ತಿಲ್ಲ. ಯಲ್ಲಪ್ಪ ಮರಣದ ನಂತರ ತಿಪ್ಪಣ್ಣ ಮತ್ತು ಫಕ್ಕೀರಪ್ಪನ ಹೆಸರಿಗೆ ವರ್ಗಾವಣೆಗೊಂಡಿರುತ್ತವೆ. ಎಲ್ಲಾ ಜಮೀನನ್ನು ಕೂಡಿಯೇ ಸಾಗುವಳಿ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಸರಕಾರದ ಸೌಲತ್ತು ಪಡೆಯಲು ವಿಭಾಗ ಮಾಡಿಕೊಂಡಿದ್ದರು.

ಪರಸಪ್ಪ ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ಪರಸಪ್ಪನಿಗೆ ರಾಮಣ್ಣ ಮತ್ತು ಶಂಭಣ್ಣ ಎಂಬ ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿ. ಪರಸಪ್ಪನ ಮಗ ರಾಮಣ್ಣ ಮರಣ ಹೊಂದಿ ದಿನಾಂಕ ಗೊತ್ತಿಲ್ಲ. ಶಂಭಣ್ಣನಿಗೆ 8 ನೇ ಪ್ರತಿವಾದಿ ಚಂದ್ರಶೇಖರ ದತ್ತಕ ಮಗ ಎಂದರೆ ಸರಿ. ರಾಮಣ್ಣನ ಹೆಂಡತಿ ಸೀತವ್ವ ಎಂದರೆ ಸರಿ. ರಾಮಣ್ಣ ಮತ್ತು ಸೀತವ್ವಳಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ, ಅವರ ಹೆಸರು ಶಿವಪುತ್ರಪ್ಪ ಮತ್ತು ಚಂದ್ರಶೇಖರಪ್ಪ ಎಂದರೆ ಸರಿ. ತಿಪ್ಪಣ್ಣ ಮತ್ತು ಸೀತವ್ವ 1956 ರಲ್ಲಿ ವಾಟ್ನಿಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಪ್ರಕಾರ ಡ ನಂ. 324 ದಾಖಲಾಯಿತು ಎಂದರೆ ಸರಿ.

ಡ ನಂ. 324 ರ ಪ್ರಕಾರ ಶಿಪ್ಪಣ್ಣನಿಗೆ ಸರ್ವೆ ನಂ. 62 ರಲ್ಲಿ ಅರ್ಧ ಹಿಸ್ಸೆ, 67 ರಲ್ಲಿ ಅರ್ಧ, 68 ರಲ್ಲಿ ಅರ್ಧ ಹಿಸ್ಸೆ ಬಂದಿರುತ್ತದೆ ಎಂದರೆ ಸರಿ. ಆ ಪ್ರಕಾರ ಅರ್ಧ ಹಿಸ್ಸೆ ಸೀತವ್ವಳಿಗೆ ಬಂದಿತ್ತು ಎಂದರೆ ಸರಿ. ಸೀತವ್ವನ ಪಾಲಿಗೆ ಬಂದ ಆಸ್ತಿಯಲ್ಲಿ ತಿಪ್ಪಣ್ಣ, ಫಕ್ಕೀರಪ್ಪ ಮತ್ತು ಅವರ ವಾರಸಾದಾರರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ತಿಪ್ಪಣ್ಣ ತಂದೆ ಯಲ್ಲಪ್ಪನಿಗೆ ಪರಸಪ್ಪ ಮತ್ತು ಯಲ್ಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ತಿಪ್ಪಣ್ಣನ ತಮ್ಮನ ಹೆಸರು ಫಕ್ಕೀರಪ್ಪ ಎಂದರೆ ಸರಿ. ಫಕ್ಕೀರಪ್ಪ ರತ್ನವ್ವಳ ತಂದೆ ಎಂದರೆ ಸರಿ. ಫಕ್ಕೀರಪ್ಪ ತಂದೆ ಯಲ್ಲಪ್ಪ 1976 ರಲ್ಲಿ ಮರಣ ಹೊಂದಿರಬಹುದು, ತಾರೀಖು ನಿಖರವಾಗಿ ಗೊತ್ತಿಲ್ಲ.

ಫಕ್ಕೀರಪ್ಪನ ಹೆಂಡತಿ ಹೆಸರು ಪೀರವ್ವ. ಪೀರವ್ವಳ ತವರುಮನೆ ಕೊಪ್ಪರಸಿಕೊಪ್ಪ. ಪೀರವ್ವಳ ಮದುವೆ ಯಾವಾಗ ಆಗಿದೆ ಗೊತ್ತಿಲ್ಲ. ಪೀರವ್ವಳ ತವರುಮನೆಯಲ್ಲಿ ಅಡ್ಡ ಹೆಸರು ಹೊಂಬಳಿ ಅಂತಾ ಇತ್ತು ಎಂದರೆ ಸರಿ. ಪೀರವ್ವ ಮದುವೆಯಾದ ಮೇಲೆ ಅರೆಗೊಪ್ಪದಲ್ಲಿ ಇದ್ದಳು.ಪೀರವ್ವ 2000 ನೇ ಇಸ್ವಿಯಲ್ಲಿ ಕೊಪ್ಪರಸಿಕೊಪ್ಪದಲ್ಲಿ ತೀರಿಕೊಂಡಳು. ಆಗ ಅವಳು ನಮ್ಮ ಮನೆಯಲ್ಲಿದ್ದಳು ಅಲ್ಲಿಯೇ ತೀರಿಕೊಂಡಳು. ನನ್ನ ತಾಯಿಗೆ ನಾರಾಯಣಪ್ಪ ಮತ್ತು ಸುಭಾಸ ಎಂಬ ಸಹೋದರರು ಎಂದರೆ ಸರಿ. ಸುಭಾಸ ಕೊಪ್ಪರಸಿಕೊಪ್ಪದಲ್ಲಿ ಮರಣ ಹೊಂದಿದ್ದರು ಎಂದರೆ ಸರಿಯಲ್ಲ ಬೈಲವಾಳದಲ್ಲಿ ಮರಣ ಹೊಂದಿರುತ್ತಾರೆ. ಸುಭಾಸ ಮರಣ ಹೊಂದಿದ ದಿನಾಂಕ ಗೊತ್ತಿಲ್ಲ.

ದಾವಾ ಆಸ್ತಿ ಬಿಟ್ಟು ನಮ್ಮ ಅಜ್ಜಿಗೆ ಮನೆ ಮತ್ತು ಖುಲ್ಲಾ ಜಾಗ ಇತ್ತು. ಈಗಲೂ ಮನೆ ಇದೆ. ಈಗ ಯಾರ ಹೆಸರಿನಲ್ಲಿದೆ ಅಂತಾ ಗೊತ್ತಿಲ್ಲ. ನನಗೆ ಹನಮಂತಪ್ಪ ರಾಮಣ್ಣ ನಾಗೋಜಿ ಗೊತ್ತು ಅವರು ತೀರಿಕೊಂಡಿರುತ್ತಾರೆ. ಕೃಷ್ಣಾಜಿ ಹನಮಂತಪ್ಪ ಪವಾರ ಇವರು ಬೈಲವಾಳದವರು. ನಾಗೋಜಿ ಅವರನ್ನು ನೋಡಿದ್ದೆ, ಕೃಷ್ಣಾಜಿ ಅವರನ್ನು ನೋಡಿಲ್ಲ. ಹನಮಂತಪ್ಪ ರಾಮಣ್ಣ ನಾಗೋಜಿ ತಾಲೂಕಿನ ಗಣ್ಯ ವ್ಯಕ್ತಿ ಎಂದರೆ ಸರಿ. ಕೃಷ್ಣಾಜಿ ಹನಮಂತಪ್ಪ ಪವಾರ ಅವರು ಸಹ ಗಣ್ಯವ್ಯಕ್ತಿ ಎಂದರೆ ಇರಬಹುದು.

ವ್ಹಿಪಿಸಿ ನಂ. 64 ಮನೆ ಮತ್ತು ಖುಲ್ಲಾ ಜಾಗೆಯನ್ನು ದಿಃ 25.02.1970 ರಲ್ಲಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಬಸವಣ್ಣೆಪ್ಪ ಷಡಗರಹಳ್ಳಿ ಹೆಸರು ಕೇಳಿದ್ದೇನೆ ನೋಡಿರುವುದಿಲ್ಲ. ಅವರು ನಮ್ಮ ಊರಿನ ಶ್ರೀಮಂತರು ಎಂದರೆ ಇರಬಹುದು. 1970 ರಲ್ಲಿ ಪೀರವ್ವ ನಮ್ಮ ಮನೆಯಲ್ಲಿ ವಾಸವಾಗಿದ್ದಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಯಾವ ಜಮೀನು ರೈತಾಪಿ ಆಸ್ತಿಗಳು ಆಗಿದ್ದವು ಅಂತಾ ಹೇಳಲು ಬರುವುದಿಲ್ಲ.

ಸರ್ವೆ ನಂ. 62/1 ಒಂದು ಎಕರೆ 29 ಗುಂಟೆ, 68/3, 01 ಎಕರೆ 22 ಗುಂಟೆ, 68/4, 01 ಎಕರೆ 12 ಗುಂಟೆ, 69/ಎ/3 ಎ, 35 ಗುಂಟೆ, ದಾವಾ ಆಸ್ತಿ 1 ಎ, ಎಚ್, ಆಯ್, ಕೆ ಆಸ್ತಿಗಳು ಮೂಲ ಪುರುಷ ನಮ್ಮ ಅಜ್ಜ ಫಕ್ಕೀರಪ್ಪ ತಂದೆ ಯಲ್ಲಪ್ಪನ ಪಾಲಿಗೆ ಬಂದ ಆಸ್ತಿಗಳು ಎಂದರೆ ಸರಿ. 1964 ನೇ ಇಸ್ವಿಯಲ್ಲಿ ರಾಮಚಂದ್ರ ಜೀವಾಜಿ ಪವಾರ ಅವರಿಗೆ ನನ್ನ ಮಾವ ನಾರಾಯಣಪ್ಪ ಮತ್ತು ಅಜ್ಜಿ ಪೀರವ್ವ ಅಗಾವ್ ಲಾವಣಿ ಕೊಟ್ಟಿದ್ದರು ಎಂದರೆ ಸರಿಯಲ್ಲ. 10 ವರ್ಷದ ಅಗಾವ್ ಲಾವಣಿ ಪತ್ರದ ಪ್ರಕಾರ ಮೊದಲು ಫಕ್ಕೀರಪ್ಪ, ನಂತರ ನಾರಾಯಣಪ್ಪ ನಂತರ ಪೀರವ್ವ ನಮ್ಮ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಲಾವಣಿ ಕೊಟ್ಟಿರಲಿಲ್ಲ ನಮ್ಮ ಜೊತೆ ವಾಸವಾಗಿದ್ದರು ಅಂತಾ ನುಡಿಯುತ್ತಾರೆ.

1964 ರ ಪೂರ್ವದಿಂದಲೂ ಫಕ್ಕೀರಪ್ಪ, ಪೀರವ್ವ ಮತ್ತು ಅವರ ಮಕ್ಕಳು ಕೊಪ್ಪರಸಿಕೊಪ್ಪದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಫಕ್ಕೀರಪ್ಪ ತನ್ನ ಪಾಲಿಗೆ ಬಂದ ಆಸ್ತಿಗಳನ್ನು ಲಾವಣಿ ಕೊಟ್ಟು ಕೊಪ್ಪರಸಿಕೊಪ್ಪದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ರಾಮಚಂದ್ರ ಜೀವಾಜಿ ಪವಾರ 4 ಜಮೀನುಗಳಿಗೆ ಭೂನ್ಯಾಯ ಮಂಡಳಿಯಲ್ಲಿ ಫಾರ್ಮ ನಂ.7 ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದು ಎಲ್ ಆರ್ ಎಂ ಎಸ್ ಆರ್ ನಂ. 80/13 ಅಂತಾ ನಡೆಯಿತು ಎಂದರೆ ಸರಿಯಲ್ಲ. ಅದು ದಿನಾಂಕಃ 18.08.1976 ರಂದು ರಾಮಚಂದ್ರ ಪವಾರ ಅವರು ಸಲ್ಲಿಸಿದ ಅರ್ಜಿಯು ಅದು ಅಗಾವ್ ಲಾವಣಿ ಆಗಿದ್ದರಿಂದ ವಜಾಗೊಂಡಿತ್ತು ಎಂದರೆ ಸಾಕ್ಷಿ ಆ ರೀತಿ ಯಾವುದೇ ಅರ್ಜಿ ಸಲ್ಲಿಸಿಲ್ಲ ಅಂತಾ ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ**.** ಸ**.** ಓ**.** ಹೇ**.** ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ**.**

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್